KABK200009312023

<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ</u>

<u>ನ್ಯಾಯಾಲಯ, ಮುಧೋಳ</u>

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರ,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

VIJAYAKUMAR KANNUR Digitally signed by VIJAYAKUMAR KANNUR Date: 2026.01.09 13:12:33 +0530

ದಿನಾಂಕ: **06** ನೇ ಜನೇವರಿ **2026**

ಅಸಲು ದಾವೆ ನಂ.**215/2023**

ವಾದಿ : **1.** ಶ್ರೀ.ಶ್ರೀಶೈಲ ತಂದೆ ಹಣಮಪ್ಪ ಕರಿಗೌಡರ,
ವಯಾ: **75** ವರ್ಷ, ಉ: ಒಕ್ಕಲುತನ,
ಸಾ: ಇಂಗಳಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

(ವಾದಿಯ ಪರ ಶ್ರೀ. ಬಿ.ಆರ್.ಡಿ., ವಕೀಲರು)

- ವಿರುದ್ಧ -

ಪ್ರತಿವಾದಿಯರು : **1.** ಶ್ರೀ.ಬಸಪ್ಪ ತಂದೆ ಹಣಮಪ್ಪ ಕರಿಗೌಡರ,
(ಮೃತ ಇವರ ವಾರಸುದಾರರು).

**1** ಎ. ಶ್ರೀಮತಿ.ಹಣಮವ್ವ ಗಂಡ ಬಸಪ್ಪ ಕರಿಗೌಡರ,
(ಮೃತ ಇವರ ವಾರಸುದಾರರು ಈಗಾಲೇ ಈ ದಾವೆಯಲ್ಲಿ
ಪಕ್ಷಗಾರರಾಗಿರುವರು).

**1**ಬಿ. ಶ್ರೀ.ಶಂಕರೆಪ್ಪ ತಂದೆ ಬಸಪ್ಪ ಕರಿಗೌಡರ,
ವಯಾ: **35** ವರ್ಷ, ಉ: ಒಕ್ಕಲುತನ,
ಸಾ: ತುಮರಮಟ್ಟಿ ಕ್ರಾಸ, ಹೊಸ ಅನಗವಾಡಿ,
ತಾ: ಬೀಳಗಿ.

**1**ಸಿ. ಶ್ರೀ.ಮಲ್ಲಪ್ಪ ತಂದೆ ಬಸಪ್ಪ ಕರಿಗೌಡರ,
ವಯಾ: **30** ವರ್ಷ, ಉ: ಒಕ್ಕಲುತನ,
ಸಾ: ತುಮರಮಟ್ಟಿ ಕ್ರಾಸ, ಹೊಸ ಅನಗವಾಡಿ,
ತಾ: ಬೀಳಗಿ.

**2.** ಶ್ರೀ.ಪಂಡೀತ ತಂದೆ ಹಣಮಪ್ಪ ಕರಿಗೌಡರ,
ವಯಾ: **59** ವರ್ಷ, ಉ: ಒಕ್ಕಲುತನ,
ಸಾ: ಇಂಗಳಗಿ, ತಾ: ಮುಧೋಳ,
ಜಿ: ಬಾಗಲಕೋಟ.

**3.** ಶ್ರೀಮತಿ.ನಿಂಬೆವ್ವ ಗಂಡ ಬಸಪ್ಪ ಮೇಟಿ,
ವಯಾ: **78** ವರ್ಷ, ಉ: ಮನೆಗೆಲಸ,
ಸಾ: ಅನಗವಾಡಿ, ತಾ: ಬೀಳಗಿ,
ಜಿ: ಬಾಗಲಕೋಟ.

**4.** ಶ್ರೀ.ಸಂಗನ್ನ ತಂದೆ ಶಿವಜಿಪ್ಪ ಕೆರಕಲಮಟ್ಟಿ,
ವಯಾ: **66** ವರ್ಷ, ಉ: ಒಕ್ಕಲುತನ,
ಸಾ: ಕಾತರಕಿ, ತಾ: ಬೀಳಗಿ,
ಜಿ: ಬಾಗಲಕೋಟ.

**5.** ಶ್ರೀ.ಮಲ್ಲಪ್ಪ ತಂದೆ ಶಿವಜಿಪ್ಪ ಕೆರಕಲಮಟ್ಟಿ,
ವಯಾ: **64** ವರ್ಷ, ಉ: ಒಕ್ಕಲುತನ,
ಸಾ: ಕಾತರಕಿ, ತಾ: ಬೀಳಗಿ,
ಜಿ: ಬಾಗಲಕೋಟ.

**6.** ಶ್ರೀಮತಿ.ಮಹಾದೇವಿ ಗಂಡ ಪಡೀತಾ ಕರಿಗೌಡರ
ವಯಾ: **55** ವರ್ಷ, ಉ: ಮನೆಗೆಲಸ,
ಸಾ: ಇಂಗಳಗಿ, ತಾ: ಮುಧೋಳ,
ಜಿ: ಬಾಗಲಕೋಟ.

**7.** ಎಸ್.ಎಲ್.ಎ.ಓ ಕೃಷ್ಣ ಮೇಲ್ದಂಡೆ ಯೋಜನೆ,
ಜಮಖಂಡಿ.

(ಪ್ರತಿವಾದಿ **2** ರ ಪರ ಶ್ರೀ.ಎಸ್.ಬಿ.ಜೆ, ವಕೀಲರು)
(ಪ್ರತಿವಾದಿ **1**(ಬಿ.ಸಿ) ಗೈರುಹಾಜರಾಗಿರುವರು)
(ಪ್ರತಿವಾದಿ **1**(ಎ) ಮೃತರಾಗಿರುವರು)

| | | |
|---|---|---|
| i | ಅರ್ಜಿಯನ್ನು ಸಲ್ಲಿಸಿರುವ ನಿಭಂದನೆಗಳು | ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ. 7 ನಿಯಮ 11(ಎ), (ಬಿ) ಮತ್ತು (ಡಿ) |
| ii | ಅರ್ಜಿಯ ಸ್ವರೂಪ | ವಾದಪತ್ರವನ್ನು ತಿರಸ್ಕರಿಸು ಕುರಿತು. |
| iii | ಅರ್ಜಿಯನ್ನು ದಾಖಲಿಸಿರುವ ದಿನಾಂಕ: | 23.05.2023 |
| iv | ಅರ್ಜಿಯ ಸಂಖ್ಯೆ: | 4 |
| v | ಅರ್ಜಿಯ ಮೇಲಿ ಆದೇಶ ಮಾಡಿದ ದಿನಾಂಕ: | 06-01-2026 |

<u>ಮಧ್ಯಂತರ ಅರ್ಜಿ ಸಂಖ್ಯೆ.4 ರ ಮೇಲಿನ ಆದೇಶ</u>

ಈ ಮಧ್ಯಂತರ ಅರ್ಜಿ ಸಂಖ್ಯೆ. 4 ಅನ್ನು ಪ್ರತಿವಾದಿ 2 ರ ಪರ ವಕೀಲರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ. 7 ನಿಯಮ 11(ಎ), (ಬಿ) ಮತ್ತು (ಡಿ) ರಡಿಯಲ್ಲಿ ಸಲ್ಲಿಸಿ ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಈ ದಾವೆಗೆ ವಾಜ್ಯಕಾರಣ ಉಂಟಾಗಿರುವುದಿಲ್ಲ ಮತ್ತು ಪೂರ್ವ ನಿರ್ಣಯಿತ ಕಾನೂನಿ ತತ್ವದ ಅಡಿಯಲ್ಲಿ ವಾದಿಯ ದಾವೆಯು ಪ್ರತಿಷೇದಿತವಾಗಿರುವುದು, ಆದ್ದರಿಂದ ವಾದಿಯ ವಾದಪತ್ರವನ್ನು ತಿರಸ್ಕರಿಸುವಂತೆ ವಿನಂತಿಸಿಕೊಂಡಿರುವರು.

**2.** ಈ ಮಧ್ಯಂತರ ಅರ್ಜಿಗೆ ಪ್ರತಿವಾದಿ 3 ರವರು ಪ್ರಮಾಣಪತ್ರ ಸಲ್ಲಿಸಿ, ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ. ಈ ಮೊದಲು ವಾದಿಯು ಇದೇ ರೀತಿಯಾದ ದಾವೆಯನ್ನು ಅಸಲು ದಾವಾ ನಂ. 311/2021 ರ ದಾವೆಯನ್ನು ಈ

ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು, ಸದರಿ ದಾವೆಯು ದಿ: 20.08.2022 ರಂದು ವಜಾಗೊಂಡಿರುವುದು. ಆದ್ದರಿಂದ ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಹಾಗೂ ಪೂರ್ವ ನಿರ್ಣಯಿತ ಕಾನೂನಿನ ಅಡಿಯಲ್ಲಿ ದಾವೆಯು ಪ್ರತಿಷೇದಿತವಾಗಿರುವುದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ವಾದಿಯ ವಾದಪತ್ರವನ್ನು ತಿರಸ್ಕರಿಸಬೇಕೆಂದು ವಿನಂತಿಸಿಕೊಂಡಿರುವರು.

**3.** ಸದರಿ ಮಧ್ಯಂತರ ಅರ್ಜಿಗೆ ವಾದಿಯ ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿ, ತಮ್ಮ ತಕರಾರಿನಲ್ಲಿ ಮಧ್ಯಂತರ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ಖೊಟ್ಟಿ ಮತ್ತು ಅಸತ್ಯದಿಂದ ಕೂಡಿರುವವು. ಈ ದಾವೆಯನ್ನು ಮುಂದೂಡುವ ಸಲುವಾಗಿ ಪ್ರತಿವಾದಿಯು ಈ ರೀತಿಯಾದ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು. ಈ ಲಿಖಿತ ಪತ್ರದಲ್ಲಿ ಹೇಳಿರುವಂತಹ ಸಂಗತಿಗಳಿಗೆ ಸಂಬಂಧಪಟ್ಟಂತಹ ಸಾಕ್ಷ್ಯದಾರಗಳ ಅವಶ್ಯಕತೆ ಇರುವುದು. ವಾದಿಯು ಅಸಲು ದಾವಾ ನಂ. 311/2021 ರ ದಾವೆಯನ್ನು ದಾಖಲು ಮಾಡಿದ್ದು ಆದರೆ ಆ ದಾವೆಯನ್ನು ವಾದಿಯು ಮುಂದುವರೆಸುವುದಿಲ್ಲ ಎಂದು ಹೇಳಿ ಹಿಂಪಡೆದುಕೊಂಡಿದ್ದು ಆ ಕಾರಣದಿಂದ ಪೂರ್ವ ನಿರ್ಣಯಿತ ತತ್ವವು ಈ ದಾವೆಗೆ ಅನ್ವಯವಾಗುವುದಿಲ್ಲ. ಅದೇ ರೀತಿಯಾಗಿ ವ್ಯಾಜ್ಯ ಕಾರಣವನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯು ಕಾನೂನಿಂದಾಗಲಿ, ಸಂಗತಿಗಳಿಂದಾಗಲಿ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುವರು.

**4.** ಪ್ರತಿವಾದಿ 2 ಪರ ವಕೀಲರ ಮತ್ತು ವಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು. ಪ್ರತಿವಾದಿ 2 ರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಹಾಗೂ ಪೂರ್ವ ನಿರ್ಣಯಿತ ಕಾನೂನಿನ ತತ್ವದ ಅಡಿಯಲ್ಲಿ ವಾದಿಯ

ದಾವೆಯು ಪ್ರತಿಷೇದಿತವಾಗಿದ್ದು ಹಾಗೂ ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಸಹ ಉಂಟಾಗಿರುವುದಿಲ್ಲ ಎಂದು ಹೇಳಿ ತಮ್ಮ ವಾದವನ್ನು ಮಂಡಿಸಿರುವರು. ವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಅಸಲು ದಾವಾ ನಂ. 311/2021 ರ ದಾವೆಯನ್ನು ವಾದಿಯು ಹಿಂಪಡೆದುಕೊಂಡಿದ್ದು ಆ ದಾವೆಯನ್ನು ನ್ಯಾಯಾಲಯದವರು ಸಾಕ್ಷ್ಯದಾರಗಳ ಮೇಲೆ ನಿರ್ಣಯ ಮಾಡಿರುವುದಿಲ್ಲ. ವಾದ ಪತ್ರದ ತೀರಸ್ಕರಿಸುವುದಕ್ಕೆ ಸಂಬಂಧಪಟ್ಟಂತೆ ಪೂರ್ವ ನಿರ್ಣಯಿತ ಕಾನೂನಿನ ಅಡಿಯಲ್ಲಿ ವಾದ ಪತ್ರವನ್ನು ತೀರಸ್ಕರಿಸಲು ಬರುವುದಿಲ್ಲ ಎಂದು ಹೇಳಿ ತಮ್ಮ ವಾದಕ್ಕೆ ಪೂರಕವಾಗಿ ಮಾನ್ಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಹಾಗೂ ಗೌರವಾನ್ವಿತ ಉಚ್ಚ ನ್ಯಾಯಾಲಯದ ತೀರ್ಪುಜನ್ಯ ಕಾನೂನಾದ **(2025) 10** ಎಸ್.ಸಿ.ಸಿ **279** (ಪಾಂಡುರಂಗನ್ ವಿರುದ್ದ ಟಿ.ಜಯರಾಮ ಚಟ್ಟಿಯಾರ ಮತ್ತು ಇತರರು) ಈ ಕಾನೂನನ್ನು ಅವಲಂಬಿಸಿರುವರು.

**5.** ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸುವುವು.

ಅಂಶಗಳು

1. ಮಧ್ಯಂತರ ಅರ್ಜಿ ಸಂಖ್ಯೆ: **4** ನ್ನು ಪುರಸ್ಕರಿಸಲು ಸಾಕಷ್ಟು ಸಮಂಜಸವಾದ ಕಾರಣ ಇರುವುದು ಎಂಬುದನ್ನು ಪ್ರತಿವಾದಿ **2** ರವರು ರುಜುವಾತುಪಡಿಸುವರೇ**?**

2. ಏನು ಆದೇಶ **?**

**6.** ಮೇಲೆ ಹೇಳಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ **1:** ನಕಾರಾತ್ಮಕವಾಗಿ.
ಅಂಶ **2:** ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ.

<u>ಕಾರಣಗಳು</u>

**7.** <u>ಅಂಶ **1**</u> **:** ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿಯರು ವಿರುದ್ಧ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಘೋಷನಾತ್ಮಕ ಮತ್ತು ಪಾಲು ವಿಭಾಗ ಕೋರಿ ಈ ದಾವೆಯನ್ನು ದಾಖಲು ಮಾಡಿರುವರು. ದಾವಾ ಸಮನ್ಸ ಜಾರಿಯಾದ ನಂತರ ಪ್ರತಿವಾದಿಯರು ಹಾಜರಾಗಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು. ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರ ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು ವಾದಿಗೆ ಮತ್ತು ಪ್ರತಿವಾದಿ 1 ಮತ್ತು 2 ರವರಿಗೆ ತಲಾ 1/3 ಹಿಸ್ಸೆ ಇದ್ದು, ವಾದಿಯು ಪಾಲು ನೀಡುವಂತೆ ದಿ: 15.03.2023 ರಂದು ಪ್ರತಿವಾದಿಗೆ ವಿನಂತಿಸಿದಾಗ ಪ್ರತಿವಾದಿಯರು ನಿರಾಕರಿಸುವುದರಿಂದ ಈ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರುವುದಾಗಿ ಎಂದು ಹೇಳಿ ಈ ದಾವೆ ದಾಖಲು ಮಾಡಿರುವರು.

**8.** ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶ 11 ನೇ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾಡಿದ ವಾದಪತ್ರದ ತಿರಸ್ಕರಣೆಯು ಒಂದು ಸಿವಿಲ್ ಕ್ರಮವನ್ನು ಪ್ರಾರಂಭದಲ್ಲಿಯೇ ಅಂದರೆ, ದಾವೆಯ ಅಧಿವಿಚಾರಣೆ ನಡೆಸದೆ ಮುಕ್ತಾಯಗೊಳಿಸಲು ನ್ಯಾಯಾಲಯಕ್ಕೆ ಪ್ರದತ್ತವಾದ ತೀವ್ರ ಪರಿಣಾಮದ ಅಧಿಕಾರವಾಗಿದ್ದು, ಸದರಿ ಅಧಿಕಾರವನ್ನು ಚಲಾಯಿಸುವುದಕ್ಕೆ ಮುಂಚಿನ ಷರತ್ತುಗಳನ್ನು ಕಟ್ಟುನಿಟ್ಟಾಗಿ ಅನ್ವಯಿಸತಕ್ಕದ್ದು.

**9.** ಮಾನ್ಯ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯಗಳು ವಿಧಿಸಿದ ಕಾನೂನಿನ ಅನುಪಾತದ ದೃಷ್ಟಿಯಿಂದ, ವಾದಪತ್ರವು ವ್ಯಾಜ್ಯ ಕಾರಣವನ್ನು ಬಹಿರಂಗಪಡಿಸುತ್ತದೆಯೇ? ಅಥವಾ ದಾವೆಯನ್ನು ಯಾವುದೇ ಕಾನೂನಿನಡಿ ಪ್ರತಿಬಂಧಿಸಲಾಗಿದೆಯೇ? ಎಂಬುದನ್ನು ತಿಳಿಯಲು, ಒಟ್ಟಾಗಿ ಓದಬೇಕಾಗಿರುವುದು ವಾದಪತ್ರದಲ್ಲಿನ ದೃಢೋಕ್ತಿಗಳನ್ನು ಎನ್ನಲಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶದ 11 ನೇ ನಿಯಮದಡಿಯಲ್ಲಿನ

ಅಧಿಕಾರವನ್ನು ಚಲಾಯಿಸುವ ಹಂತದಲ್ಲಿ, ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ನಿರೂಪಿಸಲಾದ ಪ್ರತಿವಾದಿಯ ವಾದವು ಅಷ್ಟೇನೂ ಮಹತ್ವದ್ದಲ್ಲ. ವಾದಪತ್ರದಲ್ಲಿನ ದೃಢೋಕ್ತಿಗಳು ಸ್ಪಷ್ಟವಾಗಿ ವ್ಯಾಜ್ಯಕಾರಣವನ್ನು ಬಹಿರಂಗಪಡಿಸದಿದ್ದಲ್ಲಿ ಅಥವಾ ದಾವೆಯು ಯಾವುದೇ ಕಾನೂನಿನಡಿ ಪ್ರತಿಷೇಧಿತವಾಗುವುದೆಂದು ಕಂಡುಬಂದಲ್ಲಿ ಮಾತ್ರ ವಾದಪತ್ರವನ್ನು ತಿರಸ್ಕರಿಸಬಹುದಾಗಿದೆ. ಇಲ್ಲದಿದ್ದಲ್ಲಿ, ಪಕ್ಷಕಾರರ ವಾದವನ್ನು ಅಧಿವಿಚಾರಣೆ ಮಾಡುವ ಮೂಲಕ ನ್ಯಾಯನಿರ್ಣಯ ಮಾಡಬೇಕಾಗುತ್ತದೆ.

**10.** ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-**7** ನಿಯಮ-11**(ಎ), (ಬಿ), (ಡಿ)** ಅಡಿಯಲ್ಲಿ ಅಧಿಕಾರ ಚಲಾಯಿಸುವ ಹಂತದಲ್ಲಿ ವಾದಪತ್ರದಲ್ಲಿನ ಧೃಡೋಕ್ತಿಗಳು ಸ್ಪಷ್ಟವಾಗಿ ವ್ಯಾಜ್ಯ ಕಾರಣವನ್ನು ಬಹಿರಂಗಪಡಿಸದಿದ್ದಲ್ಲಿ ಅಥವಾ ವಾದಿಯ ದಾವೆಯು ಯಾವುದೇ ಕಾನೂನಿನ ಅಡಿ ಪ್ರತಿಷೇಧಿತವಾಗುವುದೆಂದು ಕಂಡುಬಂದಲ್ಲಿ ಮಾತ್ರ ವಾದ ಪತ್ರವನ್ನು ತಿರಸ್ಕರಿಸಬಹುದಾಗಿದೆ, ಇಲ್ಲದಿದ್ದಲ್ಲಿ ವಾದವನ್ನು ಅಧಿವಿಚಾರಣೆ ಮಾಡುವ ಮೂಲಕ ನ್ಯಾಯನಿರ್ಣಯ ಮಾಡಬೇಕಾಗುತ್ತದೆ. ಸದರಿ ದಾವೆಯಲ್ಲಿನ ವಾದಪತ್ರವನ್ನು ಪರಿಶೀಲಿಸಲಾಗಿ ದಿನಾಂಕಃ **15.03.2023** ರಂದು ವಾದಿಯು ಪ್ರತಿವಾದಿಯರಿಗೆ ಪಾಲು ನೀಡುವಂತೆ ಕೋರಿದಾಗ ನಿರಾಕರಿಸಿರುವುದರಿಂದ ಈ ದಾವೆಗೆ ವಾಜ್ಯ ಕಾರಣ ಉಂಟಾಗಿರುವುದಾಗೆಂದು ಹೇಳಿ ಈ ದಾವೆಯನ್ನು ದಾಖಲು ಮಾಡಿರುವರು.

**11.** ಅದೇರೀತಿಯಾಗಿ ಪ್ರತಿವಾದಿಯ ವಾದವೆನೆಂದರೆ ವಾದಿಯು ಈಗಾಗಲೇ ಅಸಲ ದಾವಾ ನಂ.**311/2021** ರ ದಾವೆಯನ್ನು ದಾಖಲು ಮಾಡಿದ್ದು, ಆ ಕಾರಣಕ್ಕಾಗಿ ವಾದಿ ಪುನಃ ಈ ದಾವೆ ದಾಖಲು ಮಾಡಲು ಬರುವುದಿಲ್ಲ ಪೂರ್ವ ನಿರ್ಣಯಿತ ಕಾನೂನಿನ ತತ್ವದ ಅಡಿಯಲ್ಲಿ ಪ್ರತಿಷೇದಿತವಾಗಿರುವುದಾಗೆಂದು ಹೇಳಿರುವನು. ಆದರೆ ಅಸಲ ದಾವಾ ನಂ.**311/2021** ರ ದಾವೆಯನ್ನು ದಿನಾಂಕಃ **20.08.2022** ರಂದು ವಾದಿಯು ದಾವೆಯನ್ನು

ಮುಂದುವರೆಸುವುದಿಲ್ಲವೆಂದು ಹೇಳಿ ಹಿಂಪಡೆದುಕೊಂಡಿರುವರು. ಆದರೆ ಆ ದಾವೆಯಲ್ಲಿ ಈ ನ್ಯಾಯಾಲಯ ತೀರ್ಪು ನೀಡಿರುವುದಿಲ್ಲ. ಆದ್ದರಿಂದ ಪೂರ್ವ ನಿರ್ಣಯಿತ ನ್ಯಾಯಾದ ತತ್ವವು ಈ ದಾವೆಗೆ ಅನ್ವಯವಾಗುವುದಿಲ್ಲ. ಅದೇರೀತಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ತೀರ್ಪುಜನ್ಯ ಕಾನೂನಾದ (2025) 10 ಎಸ್.ಸಿ.ಸಿ 279 (ಪಾಂಡುರಂಗನ್ ವಿರುದ್ಧ ಟಿ.ಜಯರಾಮ ಚಟ್ಟಿಯಾರ ಮತ್ತು ಇತರರು) ಃ

> **"Civil Procedure Code, 1908 – Or. 7R. 11 and S.11 and Or. 9 R. 13 and Expln. thereto – Rejection of plaint – Bar of Res - judicate – State at which to be adjudicated – Plea of Res - Judicata cannot be decided in an application filed under Or.7 Rule 11 for rejection of plaint – Res Judicate is is an issue to be decided in trial and cannot be summarily decided in an application to reject plaint."**

12. ಆದ್ದರಿಂದ ಈ ಮೇಲೆ ಹೇಳಿದ ತೀರ್ಪುಜನ್ಯ ಕಾನೂನಿನ ಪ್ರಕಾರ ಈ ದಾವೆಯು ಪೂರ್ವ ನಿರ್ಣಯಿತ ಕಾನೂನಿನ ತತ್ವದ ಅಡಿಯಲ್ಲಿ ವಾದಪತ್ರವನ್ನು ತಿರಸ್ಕರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಅದೇರೀತಿ ಪ್ರತಿವಾದಿಯರು ಈ ದಾವೆಯನ್ನು ದಾಖಲು ಮಾಡಲು ಯಾವುದೇ ವಾಜ್ಯ ಕಾರಣ ಇರುವುದಿಲ್ಲ ಎಂದು ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವರು ಎಂಬ ಕಾರಣ ಮಾತ್ರಕ್ಕೆ ವಾದಿಯರ ದಾವೆಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-7 ನಿಯಮ-11 (ಎ), (ಬಿ), (ಡಿ) ಅಡಿಯಲ್ಲಿ ಪ್ರತಿಷೇಧಿತವಾಗಿರುವುದಿಲ್ಲ. ಏಕೆಂದರೆ ವಾದಪತ್ರದಲ್ಲಿನ ಸಂಗತಿಗಳನ್ನು ಪರಿಶೀಲಿಸಿದಾಗ

ಮಾತ್ರ ವಾದಿಯ ದಾವೆಯು ಕಾನೂನಿನಡಿಯಲ್ಲಿ ತಿರಸ್ಕರಿಸಲು ಅವಕಾಶ ಇರುವುದು. ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶದ ನಿಯಮ-11(ಎ), (ಬಿ), (ಡಿ) ನೇ ನಿಯಮದಡಿ ವಾದವನ್ನು ಪರಿಗಣಿಸುವಾಗ, ವಾದಪತ್ರದಲ್ಲಿನ ವಾದವನ್ನು ಪರಿಗಣಿಸುವುದು ನ್ಯಾಯಾಲಯದ ಕರ್ತವ್ಯವಾಗಿದೆ ಎಂಬುವಷ್ಟರ ಮಟ್ಟಿಗೆ ನ್ಯಾಯಾಲಯವು ವಾದ ಪತ್ರದಲ್ಲಿನ ದೃಢೋಕ್ತಿಗಳನ್ನು ಮಾತ್ರ ಪರಿಶೀಲಿಸಬೇಕಾಗುತ್ತದೆಯೆಂದು ಮತ್ತು ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳು ಮುಖ್ಯವಲ್ಲವೆಂದು ಹಾಗೂ ಆ ಹಂತದಲ್ಲಿ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿ ಮಂಡಿಸಿದ ಪ್ರತಿವಾದವು ಪೂರ್ತಿ ಅಸಂಗತವಾಗಿರುವುದು. ಆದ್ದರಿಂದ ಅಂಶ ನಂ.1 ಅನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**13.** ಅಂಶ 2 : ಈ ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಃ

## ಆದೇಶ

ಪ್ರತಿವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಸಹ ಕಲಂ 151 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 6 ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕ: **6** ನೇ ಜನೇವರಿ **2026** ದಿನದಂದು ವಿದ್ಯುಕ್ತವಾಗಿ ಘೋಷಿಸಲಾಯಿತು).

VIJAYAKUMAR KANNUR

Digitally signed by VIJAYAKUMAR KANNUR
Date: 2026.01.09 13:12:43 +0530

(ವಿಜಯಕುಮಾರ.ಎಮ್.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.